RANI CHANNAMMA UNIVERSITY
Vidyasangama, Belagavi - 591156

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ಬೆಳಗಾವಿ-591156

Phone No. :0831-2565207
Fax : 0831-2565240

**Exam Section**

Website: www.rcub.ac.in
E-mail: examconfidential@rcub.ac.in

ರಾಚವಿ/ಪವಿ30/ಬೆಳಗಾವಿ/2021-22/ 2872 ದಿನಾಂಕ: 13-11-2021

## ಸುತ್ತೋಲೆ

**ವಿಷಯ: ಸುವರ್ಣಾವಕಾಶ (Golden Chance) ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವ ಕುರಿತು.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಮಾನೋತ್ಸವದ ಅಂಗವಾಗಿ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸುವರ್ಣಾವಕಾಶ ಪರೀಕ್ಷೆಗಳನ್ನು ಅಕ್ಟೋಬರ್/ನವೆಂಬರ ತಿಂಗಳಲ್ಲಿ ಜರುಗಿಸಲಾಗುತ್ತಿದ್ದು, ಸದರಿ ಪರೀಕ್ಷೆಗಳು ಮುಗಿಯುವ ಹಂತದಲ್ಲಿರುತ್ತವೆ. ಮುಂದುವರೆದು, ಸದರಿ ಪರೀಕ್ಷೆಗೆ ಅರ್ಜಿ ತುಂಬಿದ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಆಯಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು/ಸಂಯೋಜಕರುಗಳು ವೇಳಾಪಟ್ಟಿಯನ್ನು ಪರೀಕ್ಷಾ ವಿಭಾಗದಕ್ಕೆ ಕಳುಹಿಸಿ, ತಮ್ಮ ಮಹಾವಿದ್ಯಾಲಯದ ಪ್ರಾಧ್ಯಾಪಕರುಗಳನ್ನು ಆಂತರಿಕ ಪರೀಕ್ಷಕರೆಂದು ನೇಮಕಮಾಡಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಆಂತರಿಕವಾಗಿ ದಿನಾಂಕ: 18-11-2021 ರಿಂದ 20-11-2021 ರ ವರೆಗೆ ತಮ್ಮ ತಮ್ಮ ಮಹಾವಿದ್ಯಾಲಯಗಳಲ್ಲಿ ಪ್ರಾಂಶುಪಾಲರ ನೇತೃತ್ವದಲ್ಲಿ ಜರುಗಿಸಿ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಪರೀಕ್ಷೆ ನಡೆದ ದಿನದಂದು OASIS ನಲ್ಲಿ ನಮೂದಿಸಲು ಸೂಚಿಸಲಾಗಿದೆ. ಆದ್ದೂದ್ದರಿಂದ ಸದರಿ ಪರೀಕ್ಷೆಗಳನ್ನು ಮುತುವರ್ಜಿ ವಹಿಸಿ ಸುಲಲಿತವಾಗಿ ಜರುಗಿಸಿ ಅಂತಿಮಗೊಳಿಸಲು ಹಾಗೂ ಸದರಿ ಮಾಹಿತಿಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ Project/Dissertation/Internship/Block Placement ಗಳ ಆದರಿಸಿದ ಪರೀಕ್ಷೆಗಳನ್ನು ಸಹ ಆಂತರಿಕವಾಗಿ ಜರುಗಿಸಲು ವಿಭಾಗದ ಮುಖ್ಯಸ್ಥರಿಗೆ ಸಮಯದ ಅವಕಾಶವಿದ್ದು, ಸದರಿ ಪರೀಕ್ಷೆಗಳನ್ನು ಜರುಗಿಸುವ ಕುರಿತು ವೇಳಾಪಟ್ಟಿಯನ್ನು ಪರೀಕ್ಷಾ ವಿಭಾಗದ ಗಮನಕ್ಕೆ ತಂದು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸಿ ಅಂತಿಮ ಅಂಕಗಳನ್ನು ಅದೇ ದಿನ OASIS ನಲ್ಲಿ ನಮೂದಿಸಲು ಸೂಚಿಸಲಾಗಿದೆ. ಸದರಿ ಎಲ್ಲ ಪ್ರಾಯೋಗಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಪ್ಪದೆ ವಿಶ್ವವಿದ್ಯಾಲಯದ ಮೌಲ್ಯಮಾಪನ ಕೇಂದ್ರದ ಮುಖ್ಯ ಸಂಯೋಜಕರಿಗೆ (Prof. S.B Akash, PG Central Valuation, RCU, Belagavi) ಕಳುಹಿಸಿಕೊಡಲು ಸೂಚಿಸಲಾಗಿದೆ.

13.11.21

**ಕುಲಸಚಿವರು (ಮೌಲ್ಯಮಾಪನ)**
**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ**

**ಸೂಕ್ತ ಕ್ರಮಕ್ಕಾಗಿ:**

- ಮುಖ್ಯಸ್ಥರು ಎಲ್ಲ ಸ್ನಾತಕೋತ್ತರ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು, ಪ್ರಾಂಶುಪಾಲರು/ಅಧ್ಯಕ್ಷರು/ನಿರ್ದೇಶಕರು, ಎಲ್ಲ ಸಂಯೋಜಿತ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳು ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪೂರ ಜಿಲ್ಲೆ.
- ಪ್ರಾಂಶುಪಾಲರು, ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ, ಬೆಳಗಾವಿ
- ಮುಖ್ಯಸ್ಥರು ಗಣಕಯಂತ್ರ ಕಾರ್ಯಾಲಯ, ಪರೀಕ್ಷಾ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಬೆಂಗಳೂರು
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರು (ಆಡಳಿತ) ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ಆಪ್ತ ಕಾರ್ಯದರ್ಶಿಗಳು, ಹಣಕಾಸು ಅಧಿಕಾರಿಗಳ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5. ಮುಖ್ಯಸ್ಥರು, www.rcub.ac.in website ನಲ್ಲಿ ಪ್ರಕಟಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
6. ರಕ್ಷಾಪ್ರತಿ